ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/01/ಇಸಿಎಸ್(2)/2013

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:7-8-2013

**ಸುತ್ತೋಲೆ**

ವಿಷಯ: 2013ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಮೌಲ್ಯಮಾಪಕರ/ಪರೀಕ್ಷಕರ ಪಟ್ಟಿಯನ್ನು ನವೀಕರಿಸುವ/ಇಂದೀಕರಿಸುವ ಬಗ್ಗೆ

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/01/ಇಸಿಎಸ್1/2013 ದಿನಾಂಕ: 13-7-2013

* * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಈ ಕಛೇರಿ ಸುತ್ತೋಲೆಯಲ್ಲಿ 2013ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಗೆ ಪೂರಕವಾಗಿ ಮೌಲ್ಯಮಾಪಕರ/ಪರೀಕ್ಷಕರ ಪಟ್ಟಿಯನ್ನು ಬಿಟಿಇ ಲಿಂಕ್ಸ್‌ನಲ್ಲಿ ನವೀಕರಿಸಲು/ಇಂದೀಕರಿಸಲು ದಿನಾಂಕ: 1-8-2013 ರಿಂದ 14-8-2013ರವರೆಗೆ ಕಾಲಾವಧಿ ನಿಗದಿ ಪಡಿಸಲಾಗಿದೆ. ಪಟ್ಟಿಯನ್ನು ನವೀಕರಿಸಲು/ಇಂದೀಕರಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಈ ಕೆಳಗೆ ನೀಡಿರುವ ಸೂಚನೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಈ ಮೂಲಕ ತಿಳಿಸಲಾಗಿದೆ.

1) ಮೌಲ್ಯಮಾಪಕರ/ಪರೀಕ್ಷಕರ ಪಟ್ಟಿಯಲ್ಲಿ ಸಂಬಂಧಿಸಿದ ಸಂಸ್ಥೆಯ ಪ್ರಿನ್ಸಿಪಾಲರುಗಳ ಹೆಸರುಗಳನ್ನು ಕಡ್ಡಾಯವಾಗಿ ನವೀಕರಿಸುವುದು/ಇಂದೀಕರಿಸುವುದು ಹಾಗೂ ಪ್ರಿನ್ಸಿಪಾಲರುಗಳ ಹಾಲಿ ಮೊಬೈಲ್ ಫೋನ್ ನಂಬರ್, ಇ-ಮೇಲ್ ವಿಳಾಸ ಮತ್ತು ಸಂಸ್ಥೆಯ ಸ್ಥಿರ ದೂರವಾಣಿ ನಂಬರ್‌ನ್ನು ಅಪ್‌ಡೇಟ್ ಮಾಡತಕ್ಕದ್ದು. ನಮೂದಿಸಿರುವ ವಿವರಗಳು ಸರಿ ಇದೆಯೇ ಎಂದು ಖಾತ್ರಿ ಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ

2) ಮೌಲ್ಯಮಾಪಕರ/ಪರೀಕ್ಷಕರ ಪಟ್ಟಿಯಲ್ಲಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಉಪನ್ಯಾಸಕರ/ಸಿಬ್ಬಂದಿಯವರ ಹೆಸರುಗಳನ್ನು ಕಡ್ಡಾಯವಾಗಿ ನವೀಕರಿಸುವುದು/ಇಂದೀಕರಿಸುವುದು ಹಾಗೂ ಅವರ ವಿದ್ಯಾರ್ಹತೆ, ಅನುಭವ, ಹಾಲಿ ಮೊಬೈಲ್ ಫೋನ್ ನಂಬರ್, ಇ-ಮೇಲ್ ವಿಳಾಸವನ್ನು ಅಪ್‌ಡೇಟ್ ಮಾಡತಕ್ಕದ್ದು. ನಮೂದಿಸಿರುವ ವಿವರಗಳು ಸರಿ ಇದೆಯೇ ಎಂದು ಸಂಬಂಧಪಟ್ಟ ಉಪನ್ಯಾಸಕರು/ಪರೀಕ್ಷಕರು ಖಾತ್ರಿ ಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ

3) ಮೌಲ್ಯಮಾಪಕರ/ಪರೀಕ್ಷಕರ ಪಟ್ಟಿಯಲ್ಲಿ ಯಾವುದೇ ಉಪನ್ಯಾಸಕರ/ಸಿಬ್ಬಂದಿಯವರ ಹೆಸರು ಮತ್ತು ವಿವರಗಳು ಬಿಟ್ಟು ಹೋಗದಂತೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

4) ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು/ಸಿಬ್ಬಂದಿಯವರು ವರ್ಗಾವಣೆಗೊಂಡು ಹೊಸ ಪಾಲಿಟೆಕ್ನಿಕ್‌ಗೆ ಬಂದಿದ್ದಲ್ಲಿ, ಹೊಸ ಪಾಲಿಟೆಕ್ನಿಕ್‌ನಲ್ಲಿ ಮೌಲ್ಯಮಾಪಕರ/ಪರೀಕ್ಷಕರ ಪಟ್ಟಿಯಲ್ಲಿ ಅಂತಹವರ ಹೆಸರು ಮತ್ತು ವಿವರಗಳನ್ನು ಹೊಸದಾಗಿ ನವೀಕರಿಸದೇ/ಇಂದೀಕರಿಸದೇ, ಅವರು ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಪಾಲಿಟೆಕ್ನಿಕ್‌ಗಳಲ್ಲಿ ಈಗಾಗಲೇ ನಮೂದಿಸಿರುವ ವಿವರಗಳನ್ನು ಹೊಸ ಪಾಲಿಟೆಕ್ನಿಕ್‌ನ ಮೌಲ್ಯಮಾಪಕರ/ಪರೀಕ್ಷಕರ ಪಟ್ಟಿಗೆ ಇಂಪೋರ್ಟ್ ಮಾಡತಕ್ಕದ್ದು. ಯಾವುದೇ ಕಾರಣಕ್ಕೂ ಯಾವುದೇ ಉಪನ್ಯಾಸಕರು/ಪರೀಕ್ಷಕರ ಹೆಸರು ಮತ್ತು ವಿವರಗಳು DOUBLE ENTRY ಆಗದಂತೆ ಎಚ್ಚರ ವಹಿಸಿ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ನಮೂದಿಸಿರುವ ವಿವರಗಳು ಸರಿ ಇದೆಯೇ ಎಂದು ಖಾತ್ರಿ ಪಡಿಸಿಕೊಳ್ಳುವಂತೆ ಸೂಚಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಪಾಲಿಸದ ಪ್ರಿನ್ಸಿಪಾಲರುಗಳ ಮತ್ತು ಉಪನ್ಯಾಸಕರ/ಸಿಬ್ಬಂದಿಯವರ ಮೇಲೆ ಸೂಕ್ತ ಶಿಸ್ತು ಕ್ರಮ ಮತ್ತು ಸರ್ಕಾರಿ ಆದೇಶದ ಅನ್ವಯ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಲಾಗಿದೆ.

SECRETARY
Board of Technical Examinations
Bangalore.

ಇವರಿಗೆ: 1) ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಮುಂದಿನ ಕ್ರಮಕ್ಕಾಗಿ ಮತ್ತು ಉಪನ್ಯಾಕರು/ಪರೀಕ್ಷಕರಿಗೆ ಸುತ್ತೋಲಿಸಲು
2) ಇ – ಆಡಳಿತ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3) ಕಂಪ್ಯೂಟರ್ ಕೇಂದ್ರ – ಬಿಟಿಇ ಲಿಂಕ್ಸ್‌ನಲ್ಲಿ ಪ್ರಕಟಿಸಲು

ecs(2)